# ಭಗವಂತನ ಪ್ರತ್ಯಕ್ಷ ಸಾನ್ನಿಧ್ಯದಲ್ಲಿ: ದಿವ್ಯದರ್ಶನ

ಮೂಲ : ಸೋದರಿ ದೇವಮಾತಾ

ಕನ್ನಡಕ್ಕೆ : ಡಾ. ಕೆ. ಎ. ನಾರಾಯಣನ್

ಭಾಗ ೨

(೧೯೬೨ರಲ್ಲಿ 'ಉದಯವಾಣಿ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನಮಾಲೆಯ ಮರುಮುದ್ರಣ)

ಅನಂತರ ಒಂದು ವರ್ಷ ಕಳೆಯಿತು. ಶ್ರೀರಾಮಕೃಷ್ಣರ ಜಯಂತಿ ಉತ್ಸವ ಬಂತು. ನ್ಯೂಯಾರ್ಕಿನ ನಮ್ಮ ಸಂಘದಲ್ಲಿ ಈ ಪವಿತ್ರ ಉತ್ಸವವನ್ನು ಅತ್ಯಂತ ಸರಳವಾಗಿ ಆಚರಿಸಲಾಯಿತು. ಅಂದು ಅಲ್ಲಿ ನೆರೆದಿದ್ದ ಐವತ್ತು ಅಥವಾ ಅರುವತ್ತು ಭಕ್ತರುಗಳಲ್ಲಿ ಯಾರೊಬ್ಬರೂ ಹಿಂದಿನ ದಿನದ ಸೂರ್ಯಾಸ್ತಮಯ ಕಾಲದಿಂದ ಹಿಡಿದು ಮರುದಿನದ ಸೂರ್ಯಾಸ್ತಮಯ ಸಮಯದವರೆಗೆ ಆಹಾರವನ್ನಲ್ಲ - ನೀರನ್ನು ಸಹ ಸೇವಿಸಿರಲಿಲ್ಲ. ಮನಸ್ಸಿಗೆ ಹೆಚ್ಚು ಸ್ವಾತಂತ್ರ್ಯವನ್ನು ನೀಡಬೇಕೆಂಬ ಕಾರಣಕ್ಕಾಗಿ ಮಾತ್ರವೇ ಇಂತಹ ನಿಯಮವನ್ನು ಅನುಸರಿಸಿದ್ದಲ್ಲದೆ ಕೇವಲ ಶರೀರ ಶೋಷಣೆಗಾಗಿ ಅಲ್ಲ. ನಾವೆಲ್ಲರೂ ಇಡೀ ದಿನ ಪ್ರವಚನ ಮಂದಿರದಲ್ಲಿ ಚಾಪೆಯನ್ನಾಗಲಿ ಅಥವಾ ಮೆತ್ತೆಗಳನ್ನಾಗಲಿ ಏನೂ ಹಾಕಿರದ ಬರಿ ನೆಲದ ಮೇಲೆ ಕುಳಿತು ಧ್ಯಾನ ಮಾಡುತ್ತಲೋ, ಸ್ತೋತ್ರಗಳನ್ನು ಹೇಳಿಕೊಳ್ಳುತ್ತಲೋ, ಪವಿತ್ರ ಗ್ರಂಥಗಳ ಪ್ರವಚನಗಳನ್ನು ಕೇಳುತ್ತಲೋ ಕಳೆದೆವು. ಕಾರ್ಯಕ್ರಮಗಳ ನಡುವೆ ಅಲ್ಪ ವಿರಾಮ ಇರುತ್ತಿತ್ತು. ಆದರೆ ಎಲ್ಲರ ಆಂತರ್ಯದಲ್ಲಿ ಪ್ರಶಾಂತ ಮೌನ ಆವರಿಸಿದ್ದ ಕಾರಣ ಸಂಭಾಷಣೆಗಳು ನಡೆಯುತ್ತಿರಲಿಲ್ಲ ; ಅಲ್ಪಸ್ವಲ್ಪ ಮಾತುಗಳನ್ನು ಆಡಲೇಬೇಕಾದ ಸಂದರ್ಭಗಳಲ್ಲಿ ಅತ್ಯಂತ ತಗ್ಗು ದನಿಯಲ್ಲಿ ಅದು ನಡೆಯುತ್ತಿತ್ತು.

ಅಂದಿನ ವಾತಾವರಣ ಅತ್ಯಂತ ಚೈತನ್ಯಮಯವಾಗಿತ್ತು. ಪ್ರಾರ್ಥನೆ ಮುಕ್ತಾಯದ ಹಂತವನ್ನು ತಲುಪಿತು. ಇಂತಹ ಅತ್ಯಂತ ಪ್ರಶಸ್ತವಾದ ಸಮಯದಲ್ಲಿ ನಾವು ಭಗವಂತನಲ್ಲಿ ಏನು ಕೋರಿಕೊಳ್ಳುವೆವೋ ಅದು ಅನುಗ್ರಹಿಸಲ್ಪಡುತ್ತದೆ ಎಂದು ನಮಗೆ ತಿಳಿಸಲಾಗಿತ್ತು. ಕೋರಿಕೊಳ್ಳಲು ನನಗೇನೂ ಹೊಳೆಯಲಿಲ್ಲ. ಒಂದೇ ಒಂದು ಆಸೆಯ ಹೊರತು ಬೇರಿನ್ನಾವುದೂ ನನ್ನ ಮನಸ್ಸಿನಲ್ಲಿ ಸುಳಿಯಲಿಲ್ಲ. ಅದು ಶ್ರೀರಾಮಕೃಷ್ಣರು ತಮ್ಮ ಪ್ರತ್ಯಕ್ಷ ದರ್ಶನದ ಸೌಭಾಗ್ಯವನ್ನು ಮತ್ತೊಮ್ಮೆ ನನಗೆ ಕರುಣಿಸಬೇಕು ಎಂದು.

ಆಗ ಪೂಜಾಮಂದಿರದಲ್ಲಿ ಪ್ರಶಾಂತವಾದ ಮೌನ ಆವರಿಸಿತ್ತು. ಯಾವುದೋ ಒಂದು ದಿವ್ಯಶಕ್ತಿ ನನ್ನ ಕಣ್ಣುಗಳನ್ನು ತೆರೆದು ನೋಡುವಂತೆ ನನ್ನನ್ನು ಪ್ರೇರಿಸಿತು. ನಾನು ಕಣ್ಣುಗಳನ್ನು ತೆರೆದಾಗ ಒಂದು ಅಪೂರ್ವ ದಿವ್ಯ ದೃಶ್ಯವನ್ನು ಕಂಡೆ - ವೇದಿಕೆಯ ಮೇಲೆ ಅರ್ಚಿಸಿದ ಪುಷ್ಪಗಳ ರಾಶಿಯ ನಡುವೆ ಸಾಕ್ಷಾತ್ ಶ್ರೀರಾಮಕೃಷ್ಣರೇ ವಿರಾಜಿಸುತ್ತಿದ್ದಾರೆ!

ಬೋಸ್ಟನ್ ನಗರದಲ್ಲಿ ಅಂದು ಅವರು ನನಗೆ ತೋರಿದಂತೆ ಇಂದೂ ತೋರುತ್ತಿದ್ದಾರೆ; ಆದರೆ ಇಂದಿನ ದೃಶ್ಯದಲ್ಲಿ ಕೊಂಚ ವ್ಯತ್ಯಾಸ - ಇಂದು ಅವರ ಶರೀರವೆಲ್ಲವೂ ಒಂದೇ ವಸ್ತ್ರದಿಂದ ಸಂಪೂರ್ಣವಾಗಿ ಮುಚ್ಚಲ್ಪಟ್ಟಿದೆ; ಆ ವಸ್ತ್ರವೂ ಮತ್ತು ಅವರ ಶರೀರವೂ ಉಜ್ವಲ ಕಾಂತಿಯಿಂದ ಶೋಭಿಸುತ್ತಿದೆ. ಅಷ್ಟೇ ಅಲ್ಲ; ಅವರ ಶರೀರ ಅದೆಷ್ಟು ಪಾರದರ್ಶಕವಾಗಿ ಕಾಣುತ್ತಿತ್ತು ಎಂದರೆ ಆ ಶರೀರದ ಮೂಲಕ ಅವರ ಹಿಂದೆ ಇದ್ದ ಪುಷ್ಪಗಳ ಮಸುಕಾದ ಆಕೃತಿಯನ್ನೂ ಸಹ ನಾನು ಸ್ಪಷ್ಟವಾಗಿ ನೋಡುತ್ತಿದ್ದೇನೆ! ಅವರ ವದನಾರವಿಂದ ಹಿಂದಿನಂತೆ ಮುಗುಳುನಗೆಯಿಂದ ಶೋಭಿಸುತ್ತಿದೆ ಮತ್ತು ಅವರಿಂದ ಅದೇ ದಿವ್ಯಶಕ್ತಿ ಮತ್ತು ಕರುಣೆ ಹೊರಹೊಮ್ಮುತ್ತಿದೆ. ಅವರು ಆಶೀರ್ವಾದಸೂಚಕವಾಗಿ ತಮ್ಮ ಕೈಗಳನ್ನು ಮುಂದಕ್ಕೆ ನೀಡಿ ಸ್ವಲ್ಪ ಕಾಲ ಹಾಗೆಯೇ ನಿಂತಿದ್ದು ಅನಂತರ ಅಂತರ್ಧಾನರಾದರು. ಆಮೇಲೆ ನಾನು ಸುತ್ತಲೂ ಕಣ್ಣು ಹಾಯಿಸಿ ಅಲ್ಲಿ ಕುಳಿತಿದ್ದವರ ಕಡೆ ನೋಡಲು ಅವರೆಲ್ಲರೂ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡೇ ಕುಳಿತಿದ್ದಾರೆ. ಹಾಗಾದರೆ ಆ ದಿವ್ಯ ದರ್ಶನವನ್ನು ಮತ್ತಾರೂ ನೋಡಲೇ ಇಲ್ಲವೇನು?

ಅನಂತರದ ಶರದೃತುವಿನಲ್ಲಿ ನಾನು ಹೆಚ್ಚಿನ ಯೋಗ ಸಾಧನೆಯ ಕಾರ್ಯಕ್ರಮ ಒಂದಕ್ಕೆ ಸೇರಿದೆ. ಈ ಸಾಧನೆಗೆ ಮುಖ್ಯವಾಗಿ ಕ್ರಮಬದ್ಧವಾದ ಜೀವನ, ನಿಯಮದಂತೆ ಆಹಾರ ವಿಹಾರ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ದೃಢಸಂಕಲ್ಪ ಅತ್ಯಂತ ಅವಶ್ಯವಾಗಿದ್ದವು. ಹಡಗಿನ ಒಬ್ಬ ಅಧಿಪತಿ ತನ್ನ ಹಡಗಿನ ಸಮುದ್ರ ಯಾನದ ಸಂಪೂರ್ಣ ಯೋಜನೆಗಳನ್ನು ಪೂರ್ವಭಾವಿಯಾಗಿಯೇ ಹೇಗೆ ನಿರ್ಧರಿಸಿಕೊಂಡಿರುತ್ತಾನೋ ಹಾಗೆಯೇ ನಾನೂ ನನ್ನ ದಿನ ನಿತ್ಯದ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೆ. ನಾನು ನಸುಕಿಗೇ ಏಳುತ್ತಿದ್ದೆ; ಮಿತವಾಗಿ ಆಹಾರವನ್ನು ತೆಗೆದುಕೊಳ್ಳುತ್ತಿದ್ದೆ; ಸಾಧನೆಗೆ ನಿರ್ದಿಷ್ಟವಾದ ಕಾಲವನ್ನೇ ಅನುಸರಿಸುತ್ತಿದ್ದೆ; ಪ್ರಕಟನಾ ಕಾರ್ಯಕ್ಕೂ ನಿಗದಿಯಾದ ಕಾಲವನ್ನು ನಿಷ್ಕರ್ಷಿಸಿದ್ದೆ. ಈ ಕೆಲಸಕ್ಕೆ ಸಂಬಂಧಿಸಿದಂತೆ ಬೆರಳಚ್ಚಿನ ಯಂತ್ರದ ಕೆಲಸ, ಕರಡು ಪ್ರತಿಗಳನ್ನು ತಿದ್ದುವುದು ಮತ್ತು ಸಂಪಾದಕನ ಪರಿಷ್ಕರಿಸುವ ಕೆಲಸ ಮುಂತಾದ ಅನೇಕ ಕೆಲಸಗಳು ಇರುತ್ತಿದ್ದವು. ಈ ಕೆಲಸಗಳಲ್ಲಿ ಸ್ವಲ್ಪ ಕಾಲ ಸಂಸ್ಥೆಯ ಹೊರಗೂ, ಉಳಿದ ಕಾಲ ಸಂಸ್ಥೆಯ ಕಾರ್ಯಾಲಯದಲ್ಲಿ ಪುಸ್ತಕಗಳಿಗೆ ಬರುತ್ತಿದ್ದ ಕೋರಿಕೆಗಳನ್ನು ಗಮನಿಸುವುದರಲ್ಲೂ ಮತ್ತು ಪ್ರಕಟನೆಗೆ ಸಂಬಂಧಿಸಿದಂತೆ ಅನೇಕ ಕಾರ್ಯಗಳನ್ನು ನೋಡಿಕೊಳ್ಳುವುದರಲ್ಲೂ ಕಳೆಯುತ್ತಿತ್ತು. ಈ

ಎಲ್ಲ ಕೆಲಸಗಳನ್ನೂ ನಾನು ಅತ್ಯಂತ ಉತ್ಸಾಹ ಮತ್ತು ನಿಷ್ಠೆಯಿಂದ ಮಾಡುತ್ತಿದ್ದೆ. ಹೀಗಿದ್ದರೂ ನನ್ನ ಅಂತರ್ಯವನ್ನು ಒಂದು ವ್ಯಥ ಕೊರೆಯುತ್ತಲೇ ಇತ್ತು.

ನಾನು ಕೈಗೊಂಡಿದ್ದ ಯೋಗ ಸಾಧನೆಯಲ್ಲಿ ಕುಳಿತುಕೊಳ್ಳಬೇಕಾದ ಆಸನ, ಪ್ರಾಣಾಯಾಮದ ಕ್ರಮ, ಚಿತ್ತೈಕಾಗ್ರತೆಗೆ ಅಭ್ಯಾಸ ಮತ್ತು ಧ್ಯಾನಕ್ಕೆ ವಿಶಿಷ್ಟವಾದ ಒಂದು ವಸ್ತು: ಇವುಗಳೆಲ್ಲವೂ ಇದ್ದವು. ಇವುಗಳಲ್ಲಿ ಕೊನೆಯ ವಿಷಯದಲ್ಲೇ ನನಗಿದ್ದ ಕೊರಗು. ಈ ಹೊಸ ಸಾಧನೆಯ ಪೂರ್ವದಲ್ಲಿ ನಾನು ಶ್ರೀ ರಾಮಕೃಷ್ಣರನ್ನೇ ನನ್ನ ಧ್ಯಾನದ ವಿಷಯವನ್ನಾಗಿ ಆರಿಸಿಕೊಂಡಿದ್ದೆ. ಆದರೆ ಈಗ ನನಗೆ ಧ್ಯಾನಕ್ಕೆಂದು ಕೊಟ್ಟಿದ್ದ ವಿಷಯ ನೀರಸವಾಗಿ ಮತ್ತು ಕೇವಲ ಯಾಂತ್ರಿಕವಾಗಿ ಇರುವಂತೆ ತೋರುತ್ತಿತ್ತು.



ಆದರೂ ಇದನ್ನು ಹೇಗೋ ಸಹಿಸಿಕೊಂಡು ನಾನು ಈ ಸಾಧನೆಯನ್ನು ಕೆಲವು ವಾರಗಳು ಮುಂದುವರಿಸಿದೆ. ಅನಂತರ ಸಾಧನೆಯನ್ನು ಹೇಳಿಕೊಡುತ್ತಿದ್ದ ಗುರುಗಳಲ್ಲಿ ನಾನು ಈ ವ್ಯಥೆಯನ್ನು ತೋಡಿಕೊಂಡೆ. ಕೂಡಲೇ ಅವರು ನಾನು ಹಿಂದೆ ಅನುಸರಿಸುತಿದ್ದ ಸಾಧನೆಯನ್ನೇ ಮುಂದುವರಿಸಲು ತಮ್ಮ ಒಪ್ಪಿಗೆಯನ್ನು ನೀಡಿದರು.

ನಾನು ಸಂಘದ ಮಂದಿರಕ್ಕೆ ಹೆಚ್ಚೇನೂ ದೂರವಿಲ್ಲದ ಸುಂದರವಾದ ಒಂದು ಮನೆಯಲ್ಲಿ ವಾಸಿಸುತ್ತಿದ್ದೆ. ಅದರಲ್ಲಿ ನನ್ನ ಸ್ವಂತ ಸಾಧನೆಗೆ ಒಂದು ಪೂಜಾಮಂದಿರವನ್ನು ನಿರ್ಮಿಸಿಕೊಂಡಿದ್ದೆ. ಅಂದು ರಾತ್ರಿ ನಾನು ಒಂದು ಹೊಸ ಸಂಭ್ರಮದಿಂದ ಪೂಜಾ ಮಂದಿರವನ್ನು ಪ್ರವೇಶಿಸಿ ಆಸನದಲ್ಲಿ ಕುಳಿತು ಧ್ಯಾನಕ್ಕೆ ಪೂರ್ವಭಾವಿಯಾದ ವಿಧಿಗಳೆಲ್ಲವನ್ನೂ ಮುಗಿಸಿ ಇನ್ನೇನು ಧ್ಯಾನವನ್ನು ಮೊದಲು ಮಾಡಬೇಕು – ಶ್ರೀ ರಾಮಕೃಷ್ಣರು ನನ್ನ ಮುಂದೆ ಪ್ರತ್ಯಕ್ಷರಾದರು. ಈ ಬಾರಿ ಅವರು ಬೋಸ್ಟನ್ನಿನಲ್ಲಿ ಅಥವಾ ಜಯಂತ್ಯುತ್ಸವದ ದಿನದಂದು ಕಾಣಿಸಿದ ಮೂರ್ತಿಯಂತಿರಲಿಲ್ಲ. ಇಂದು ನಾನು ಉಜ್ವಲವಾದ ತೇಜೋರಾಶಿಯಾಗಿ ಬೆಳಗುತ್ತಿರುವ ಮತ್ತು ಮಿಂಚಿನಂತೆ ಹೊಳೆಯುತ್ತಿರುವ ವಸ್ತ್ರವನ್ನು ಧರಿಸಿದ್ದ ಬೃಹದಾಕಾರದ ಮೂರ್ತಿಯನ್ನು ಕಂಡೆ. ಕೂಡಲೇ ನಾನು ಅತ್ಯಂತ ವಿಸ್ಮಯ ಮತ್ತು ಭಯ ಭಕ್ತಿಯಿಂದ ಅವರಿಗೆ ಸಾಷ್ಟಾಂಗ ಪ್ರಣಾಮವನ್ನು ಅರ್ಪಿಸಿ, ಹಾಗೆಯೇ ತೆವಳುತ್ತಾ ವೇದಿಕೆಯ ಬಳಿಗೆ ಮುಂದುವರಿದು ಅವರ ಚರಣ ಕಮಲಗಳ ಮೇಲೆ ನನ್ನ ಶಿರಸ್ಸನ್ನಿಟ್ಟೆ. ಅನಂತರ ಏನು ನಡೆಯಿತೆಂದು ನನಗೆ ಸ್ವಲ್ಪವೂ ಗೊತ್ತಾಗಲಿಲ್ಲ. ನಾನು ನನ್ನ ಸಹಜ ಸ್ಥಿತಿಗೆ ಬಂದ ಅನಂತರ ಆ ವೇದಿಕೆಯ ಮೇಲೆ ನನ್ನ ಶಿರಸ್ಸನ್ನು ಒಂದು ಗಂಟೆಗಿಂತಲೂ ಹೆಚ್ಚು ಕಾಲ ಇಟ್ಟಿದ್ದೆ ಎಂದು ಅರಿವಾಯಿತು. ಆ ಸಮಯದಲ್ಲಿ ನನಗೆ ಏನು ಅನುಭವವಾಯಿತು ಎಂಬುದು ಪ್ರಾಯಶಃ ನನ್ನ ತಿಳಿವಳಿಕೆಗೆ ಬರಲಾರದು. ಆದರೆ ಆ ಅನುಭವ ನನ್ನ ಜೀವನಕ್ಕೆ ಒಂದು ಹೊಸ ದೃಷ್ಟಿಯನ್ನು ಮತ್ತು ನನ್ನ ಹೃದಯಕ್ಕೆ ಒಂದು ಹೊಸ ಬೆಳಕನ್ನು ನೀಡಿತು.

ಮರುದಿನ – ಧ್ಯಾನದ ಸಮಯದಲ್ಲಿ ಶ್ರೀ ರಾಮಕೃಷ್ಣರು ತಮ್ಮ ಎಂದಿನ ರೂಪದಲ್ಲೇ ಕಾಣಿಸಿಕೊಂಡರು. ಇಂದು ಅವರು ಒಂದು ಬೆಳಗುವ ಜ್ಯೋತಿಯಿಂದ ಆವೃತರಾಗಿದ್ದರು. ನಾನು ಅವರನ್ನು ವಿಸ್ಮಯ ಮತ್ತು ಭಕ್ತಿಯಿಂದ ನೋಡುತ್ತಿದ್ದಂತೆಯೇ ಒಂದು ವಸ್ತ್ರವನ್ನು ಕಳಚಿ ಹಾಕುವಂತೆ ಅವರು ತಮ್ಮ ಶರೀರವನ್ನು ಕಳಚಿ ಹಾಕಿ ಕೇವಲ ತೇಜೋರಾಶಿಯಾಗಿಯೇ ಬೆಳಗಲು ಆರಂಭಿಸಿದರು. ಆದರೆ ನನಗೆ ಹಿಂದಿನ ದಿನದಂತೆ ಇಂದು ಭಯ ಅಥವಾ ಆಶ್ಚರ್ಯ ಏನೂ ಆಗಲಿಲ್ಲ ; ಬದಲಾಗಿ ಸುಗಂಧದ ಪರಿಮಳದಂತೆ ಒಂದು ಬಗೆಯ ಮೃದು ಮಧುರ ಕೋಮಲತೆಯು ಅವರನ್ನು ಬಳಸಿಕೊಂಡಿದ್ದು, ನನ್ನಲ್ಲಿ ಉಂಟಾಗಬಹುದಾದ ಭಯ, ವಿಸ್ಮಯಗಳನ್ನು ಸಂಪೂರ್ಣವಾಗಿ ತೊಡೆದು ಹಾಕಿಬಿಟ್ಟಿತ್ತು.

ಮೂರನೆಯ ದಿನವೂ ಪ್ರಾರ್ಥನೆಯ ವೇಳೆಯಲ್ಲಿ ಅವರು ನನಗೆ ಪ್ರತ್ಯಕ್ಷರಾದರು. ಇಂದು ಅವರು ನನಗೆ ಮೊದಲ ಬಾರಿ ಅವರ ಪರಿಚಯವನ್ನು ಮಾಡಿಕೊಟ್ಟ ಬೆಂಕಿಗೂಡಿನ ಫಲಕದ ಮೇಲಿದ್ದ ಛಾಯಾಚಿತ್ರದಂತೆ ಕಂಡುಬಂದರು. ಆದರೆ ಇಂದು ಅವರ ಶರೀರ ಕೇವಲ ಒಂದು ಲಾಂದ್ರದಂತೆಯೂ ಅದರೊಳಗೆ ಅವರು ಪ್ರಜ್ವಲಿಸುತ್ತಿರುವ ಒಂದು ಜ್ಯೋತಿಯಂತೆಯೂ ಮತ್ತು ಆ ಜ್ಯೋತಿ ತನ್ನ ಕಾಂತಿಯನ್ನು ಹೊರಸೂಸುತ್ತ ಸುತ್ತಲೂ ಹರಡುತ್ತಿರುವಂತೆಯೂ ನನಗೆ ತೋರಿತು. ಈ ಮೂರು ದಿನಗಳೂ ಅವರು ನನ್ನೊಡನೆ ಏನೂ ಮಾತಾಡದೆ ಮೌನವನ್ನೇ ತಳೆದಿದ್ದರು. ಆದರೂ ಈ ಮೌನದಲ್ಲಿ ಒಂದು ವಿಶಿಷ್ಟವಾದ ಅರ್ಥ ನನಗೆ ಗೋಚರವಾಗುತ್ತಿತ್ತು. ಇದರಿಂದ ಶ್ರೀರಾಮಕೃಷ್ಣರು ಮಾನವ ಶರೀರವನ್ನೇ ಧರಿಸಿರಲಿ ಅಥವಾ ದಿವ್ಯಶರೀರವನ್ನೇ ಧರಿಸಿರಲಿ, ಅವರು ಮಾನವರ ಮೇಲೆ ತಮಗಿರುವ ಅಪಾರವಾದ ಪ್ರೇಮದ ದೆಸೆಯಿಂದ ಅನವರತವೂ ಅವರೊಂದಿಗೆ

ಇರುತ್ತ, ಅವರಿಗೆ ಅವಶ್ಯವಾದ ಸಲಹೆ ಮತ್ತು ಸಹಾಯಗಳನ್ನು ನೀಡುತ್ತ, ಸದಾ ಅವರನ್ನು ಸಂರಕ್ಷಿಸುತ್ತ ಮತ್ತು ಅನುಗ್ರಹ ರೂಪವಾದ ತಮ್ಮ ಪ್ರತ್ಯಕ್ಷ ಸಾನ್ನಿಧ್ಯದ ಅರಿವನ್ನು ಅವರಿಗೆ ದಯ ಪಾಲಿಸುತ್ತ ಇರುವ ಮಹಾಪುರುಷರೆಂಬ ದೃಢ ವಿಶ್ವಾಸ ನನಗೆ ಉಂಟಾಯಿತು.

ಇದಾದ ನಾಲ್ಕು ತಿಂಗಳ ನಂತರ ಫೆಬ್ರವರಿ ತಿಂಗಳಲ್ಲಿ ನಾನು ಶ್ರೀರಾಮಕೃಷ್ಣರ ವಚನಗಳ ಸಂಕಲನವನ್ನು ಕೈಗೊಂಡೆ. ಈ ಕೆಲಸವನ್ನು ಸಂಘದ ಅಧ್ಯಕ್ಷರು ಕೈಗೊಳ್ಳಲು ಅವರಿಗೆ ಕಾಲಾವ ಕಾಶವಿಲ್ಲದ ಕಾರಣ ಅವರ ಪರವಾಗಿ ನಾನು ಇದನ್ನು ಕೈಗೊಂ ಡಿದ್ದೆ. ನನಗೆ ಇದಕ್ಕಿಂತಲೂ ಹರ್ಷದಾಯಕವಾದ ಕೆಲಸ ಬೇರಾ ವುದೂ ಇರಲಿಲ್ಲ. ಆದ್ದರಿಂದ ನಾನು ಈ ಕೆಲಸವನ್ನು ಬಹಳ ಉತ್ಸಾಹದಿಂದ ಮೊದಲು ಮಾಡಿದೆ. ಭಕ್ತರ ಸ್ಮೃತಿಸಂಗ್ರಹಗಳಲ್ಲಿ ಶ್ರೀರಾಮಕೃಷ್ಣರ ವದನಾರವಿಂದದಿಂದ ಬಂದಿರಬಹುದಾದ ವಚನಾಮೃತಕ್ಕೋಸ್ಕರವಾಗಿ ನಾನು ಅನೇಕ ಹಳೆಯ ಪತ್ರಿಕೆ ಗಳನ್ನು ಕೂಲಂಕಷವಾಗಿ ಪರಿಶೀಲಿಸಲು ಆರಂಭಿಸಿದೆ. ಹೀಗೆ ನಾನು ಬಹಳ ಗಮನವಿಟ್ಟು ಅನೇಕ ಹಳೆಯ ದಾಖಲೆಗಳನ್ನೂ, ಪುಸ್ತಕಗಳನ್ನೂ, ಪ್ರಬಂಧಗಳನ್ನೂ ಮತ್ತು ಲೇಖನಗಳನ್ನೂ ಪರಿ ಶೀಲಿಸಿದೆ. ಅವುಗಳಲ್ಲಿ ಕೆಲವು ಪುಸ್ತಕಗಳ ಪ್ರತಿಗಳು ತೀರಿ ಹೋಗಿ ದ್ದವು. ಹೀಗೆ ನನಗೆ ದೊರಕಿದ ಎಲ್ಲ ಮೂಲಗಳಿಂದಲೂ ಹುಡುಕಿ ತೆಗೆದು ಸುಮಾರು ಏಳುನೂರು ವಚನಗಳನ್ನು ಸಂಗ್ರಹಿಸಿದೆ. ಇವುಗಳನ್ನು ಕ್ರಮಬದ್ಧವಾಗಿ ಜೋಡಿಸದೆ ಹಾಗೆಯೇ ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಸರಿಯಲ್ಲ ಎಂದು ಯೋಚಿಸಿ ಸುಲಭವಾಗಿ ಓದಲು ಸಹಾಯವಾಗುವಂತೆ ಅವುಗಳನ್ನು ವಿಷಯ ಗಳಿಗೆ ಅನುಗುಣವಾಗಿ ಬೇರೆಬೇರೆ ಅಧ್ಯಾಯಗಳನ್ನಾಗಿ ವಿಂಗ ಡಿಸಿ ತಕ್ಕ ಶೀರ್ಷಿಕೆಗಳನ್ನು ಒದಗಿಸಲು ನಿಶ್ಚಯಿಸಿದೆ.

ಈ ಕೆಲಸ ಅತ್ಯಂತ ಶ್ರಮಸಾಧ್ಯವೂ ಮತ್ತು ಹೆಚ್ಚು ಸಮಯ ವನ್ನು ತೆಗೆದುಕೊಳ್ಳುವುದೂ ಆಗಿತ್ತು. ಆದರೂ ಒಂದು ಘಳಿಗೆ ಯೂ ಇದನ್ನು ಬಿಟ್ಟಿರಲು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ. ನಾನು ಹೊತ್ತಿಗೆ ಮುಂಚೆಯೇ ಎದ್ದು ರಾತ್ರಿ ಹೊತ್ತು ಮೀರುವ ವರೆಗೂ ಈ ಕೆಲಸದಲ್ಲಿಯೇ ನಿರತಳಾಗಿರುತ್ತಿದ್ದೆ. ಈ ವಚನ ಗಳನ್ನು ನಾನು ಆದಿಯಿಂದ ಅಂತ್ಯದ ವರೆಗೆ ಅನೇಕ ಬಾರಿ ಪರಿ ಶೀಲಿಸಿ ಒಂದೇ ವಿಷಯಕ್ಕೆ ಸಂಬಂಧಿಸಿದ ವಚನಗಳನ್ನು ಒಂದೇ ಅಧ್ಯಾಯಕ್ಕೆ ಸೇರಿಸುತ್ತಲೋ ಅಥವಾ ಹಲವು ಶಿರೋನಾಮೆಯ ಅಡಿಯಲ್ಲಿ ಸೇರಿಸುತ್ತಲೋ ಬಂದೆ. ನನಗೆ ತಿಳಿದಿದ್ದಂತೆ ಇಂತಹ ವಿಂಗಡಣೆಯ ಕೆಲಸ ಹಿಂದೆ ಆಗಿರಲಿಲ್ಲ. ನನ್ನ ಈ ಪ್ರಯತ್ನವೇ ಮೊದಲನೆಯದು. ಇದರ ಪರಿಣಾಮವಾಗಿ ಅತ್ಯಂತ ಪ್ರಭಾವ ಶಾಲಿಯಾದ ಅವರ ವಚನಗಳು ನನ್ನ ಅಂತರಾಳವನ್ನು ಭೇದಿಸಿ ಅಲ್ಲೇ ನೆಲೆಸಿಬಿಟ್ಟವು. ಹೀಗಾಗಿ ನಾನು ಅವುಗಳನ್ನು ಸ್ಮರಿಸುತ್ತಾ ಊಟ ಮಾಡುತ್ತಿದ್ದೆ; ಅವುಗಳನ್ನು ಮನನ ಮಾಡುತ್ತಾ ಓಡಾಡು ತ್ತಿದ್ದೆ; ಅವುಗಳನ್ನೇ ಧ್ಯಾನ ಮಾಡುತ್ತಾ ನಿದ್ರೆಗೆ ಹೋಗುತ್ತಿದ್ದೆ. ಒಟ್ಟಿನಲ್ಲಿ ಹೇಳುವುದಾದರೆ ನಾನು ಸಂಪೂರ್ಣವಾಗಿ ಅದರಲ್ಲಿ ತನ್ಮಯಳಾಗಿಬಿಟ್ಟಿದ್ದೆ.

ವಸಂತ ಋತು ಬಂತು. ಅದು ಏಪ್ರಿಲ್ ತಿಂಗಳು; ಬೇಸಿಗೆ ಯೊಳಗೆ ಈ ವಚನಗಳನ್ನು ಪ್ರಕಟಿಸಬಹುದು ಎಂಬ ಆಶ್ವಾಸನೆ ಯನ್ನು ನಾನು ಅಧ್ಯಕ್ಷರಿಗೆ ಕೊಟ್ಟಿದ್ದೆ. ಅದರ ಶುದ್ಧ ಪ್ರತಿಯ ಕೆಲಸ, ಮುಕ್ತಾಯದ ಹಂತವನ್ನು ತಲುಪಿತ್ತು. ಒಂದು ಬೆಳಿಗ್ಗೆ ನಾನು ಅದರ ಬೆರಳಚ್ಚಿನ ಕೆಲಸದಲ್ಲಿ ನಿರತಳಾಗಿದ್ದೆ. ಆಗ ಯಾರೋ ನನ್ನ ಭುಜವನ್ನು ಮೆಲ್ಲನೆ ತಟ್ಟಿದಂತೆ ಆಯಿತು. ಆಗ ಅಲ್ಲಿದ್ದವಳು ನಾನೊಬ್ಬಳೆ ಮತ್ತು ನಾನು ಕುಳಿತಿದ್ದ ಕೋಣೆ ನಿಜ ವಾಗಿ, ಒಂದು ಬಿಸಿಲುಮಚ್ಚು ಆಗಿತ್ತು. ಅದಕ್ಕೆ ಮೇಲ್ಛಾವಣಿ ಇರಲಿಲ್ಲವಾದ್ದರಿಂದ ಪ್ರಾಯಶಃ ಆಕಾಶದಲ್ಲಿ ಇಬ್ಬನಿಯು ಘನೀ ಭೂತವಾಗಿ ನನ್ನ ಭುಜದ ಮೇಲೆ ತೊಟ್ಟಿಕ್ಕಿರಬಹುದು ಎಂದು ನಾನು ಭಾವಿಸಿ ಆ ಭಾಗವನ್ನು ನನ್ನ ಕೈಯಿಂದ ಒರೆಸಿಕೊಂಡು ಬೆರಳಚ್ಚಿನ ಕೆಲಸವನ್ನು ಮತ್ತೆ ಮುಂದುವರಿಸಿದೆ.

ಪುನಃ ಯಾರೋ ತಟ್ಟಿದಂತೆ ಆಯಿತು. ಇದು ಒಬ್ಬ ವ್ಯಕ್ತಿಯ ಹಸ್ತಸ್ಪರ್ಶ ಎಂಬುದರಲ್ಲಿ ನನಗೆ ಏನೂ ಸಂಶಯ ಉಳಿಯಲಿಲ್ಲ. ಆಗ ನಾನು ಬೆಚ್ಚಿ ಬಿದ್ದು ಹಿಂದಿರುಗಿ ನೋಡುತ್ತೇನೆ – ನನ್ನ ಎಡಭುಜದ ಹಿಂದೆಯೇ ಶ್ರೀರಾಮಕೃಷ್ಣರು ನಿಂತುಕೊಂಡಿ ದ್ದಾರೆ. ಅವರು ಚಿತ್ರದಲ್ಲಿರುವಂತೆ ಕಂಗೊಳಿಸುತ್ತಿದ್ದಾರೆ ಮತ್ತು ನಿಜವಾಗಿಯೂ ಜೀವಂತವಾಗಿದ್ದಾರೆ; ಏಕೆಂದರೆ ನನ್ನ ಭುಜದ ಮೇಲಿಟ್ಟಿರುವ ಅವರ ಅಂಗೈಯಿನ ಶಾಖದ ಅರಿವೂ ಸಹ ನನಗಾಗುತ್ತಿದೆ! ಅವರಿಂದ ಪ್ರಕಾಶವೇನೂ ಹೊರಹೊಮ್ಮುತ್ತಿರ ಲಿಲ್ಲ ; ಕೇವಲ ಅವರ ಮಂದಹಾಸವೇ ಅವರನ್ನು ಬೆಳಗುತ್ತಿದೆ. ಅವರು ನಿಸ್ಸಂಶಯವಾಗಿ ನನ್ನ ಬಳಿಯಲ್ಲೇ ಜೀವಂತವಾಗಿ ನಿಂತಿ ದ್ದಾರೆ. ಅವರು ಸ್ವಲ್ಪಕಾಲ ಹಾಗೆಯೇ ನಿಂತಿದ್ದು, ಹಾಗೆಯೇ ಅದೃಶ್ಯರಾದರು.

ಒಂದು ಮರದ ಕೊಂಬೆಯೊಳಗಿನಿಂದ ಚಿಗುರೊಂದು ಹೇಗೆ ಮೂಡಿ ಬರುತ್ತದೆಯೋ ಅಥವಾ ಒಂದು ಗಿಡದಲ್ಲಿ ಮೊಗ್ಗೊಂದು ಅರಳಿ ಅದೆಂತು ಹೂವಾಗುತ್ತದೆಯೋ, ಅದರ ಮರ್ಮವನ್ನು ಪ್ರಾಯಶಃ ಯಾರೂ ಅರಿಯಲಾರರು; ಏಕೆಂದರೆ ಗಿಡ ಆ ಕ್ರಿಯೆಯನ್ನು ರಹಸ್ಯವಾಗಿಯೇ ಉಳಿಸಿಟ್ಟಿದೆ. ಇದೇ ರೀತಿ ಶ್ರೀ ರಾಮಕೃಷ್ಣರು ಹೇಗೆ ಪ್ರತ್ಯಕ್ಷರಾಗಿ ಕಾಣಿಸಿಕೊಂಡರು ಮತ್ತು ಹೇಗೆ ಕಣ್ಮರೆಯಾದರು ಎಂಬುದರ ರಹಸ್ಯವನ್ನು ಅರಿಯಲು ನನಗೆ ಸಾಧ್ಯವಾಗಲಿಲ್ಲ. ಅವರು ಪ್ರತ್ಯಕ್ಷರಾದರು ಮತ್ತು ಅದೃಶ್ಯ ರಾದರು ಎಂಬುದನ್ನು ಮಾತ್ರ ನಾನು ಬಲ್ಲೆ. ಸಂತ ಅವಿಸೆನ್ನಾ ಇಂತಹ ಕ್ರಿಯೆಯನ್ನು ಹೀಗೆ ವರ್ಣಿಸಿದ್ದಾರೆ: ''ಕಾಳ ರಾತ್ರಿ ಯಲ್ಲಿ ಹುಲ್ಲುಗಾವಲಲ್ಲಿ ಮಿಂಚೊಂದು ಥಟ್ಟನೆ ಥಳಥಳಿಸಿ ಆ ಹುಲ್ಲುಗಾವಲನ್ನೆಲ್ಲಾ ಬೆಳಗಿಸಿ ಉತ್ತರಕ್ಷಣದಲ್ಲಿ ಅಂಧಕಾರ ಮತ್ತೆ ಕವಿದು ಆ ದೃಶ್ಯವೆಲ್ಲಾ ಮರೆಯಾದಂತೆ'' ಎಂದು. ಆದರೆ, ಈ ಪ್ರತ್ಯಕ್ಷ ದರ್ಶನದ ಪ್ರಭಾವ ಬಹುಕಾಲ ನನ್ನ ಹೃದಯಾಂತರಾಳ ದಲ್ಲಿ ಅಚ್ಚಳಿಯದೆ ಉಳಿದುಕೊಂಡಿದೆ. *(ಮುಂದಿನ ಸಂಚಿಕೆಗೆ)*